10)	ದಕ್ಷಿಣ ಕನ್ನಡ	–	7,88,500–00
11)	ಕೊಡಗು	–	6,78,500–00
12)	ಚಿಕ್ಕಮಗಳೂರು	–	6,48,500–00
13)	ಹಾಸನ	–	6,28,500–00
14)	ಚಾಮರಾಜನಗರ	–	6,23,500–00
15)	ಉಡುಪಿ	–	8,58,500–00
16)	ಬೆಳಗಾಂ	–	7,17,500–00
17)	ಉತ್ತರ ಕನ್ನಡ	–	6,93,500–00
18)	ಧಾರವಾಡ	–	13,43,600–00
19)	ಬಿಜಾಪುರ	–	8,83,500–00
20)	ಹಾವೇರಿ	–	6,83,500–00
21)	ಗದಗ್	–	7,38,500–00
22)	ಬಾಗಲಕೋಟೆ	–	7,93,500–00
23)	ಗುಲ್ಬರ್ಗಾ	–	7,03,500–00
24)	ಬೀದರ್	–	8,18,500–00
25)	ರಾಯಚೂರು	–	7,12,500–00
26)	ಬಳ್ಳಾರಿ	–	7,03,500–00
27)	ಕೊಪ್ಪಳ	–	7,04,500–00

2286(3093) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):– ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಕೆ.ಯು.ಡಬ್ಲ್ಯು.ಎಸ್. ಹೊಸ ಯೋಜನೆ ತಯಾರು ಮಾಡಿದೆಯೆ;

ಆ) ಯೋಜನೆಗೆ ಅವಶ್ಯಕತೆ ಇರುವ ಹಣ ಎಷ್ಟು;

ಇ) ಈ ಯೋಜನೆ ಮಂಜೂರು ಆಗಿದೆಯೇ;

ಈ) ಯೋಜನೆಯ ಕಾಮಗಾರಿ ಯಾವಾಗ ಆರಂಭವಾಗಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ;

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು):–

ಅ) ಹೌದು

ಆ) ರೂ. 28.00 ಕೋಟಿಗಳ ಅವಶ್ಯಕತೆ ಇರುತ್ತದೆ.

ಇ) ಪರಿಶೀಲನೆಯಲ್ಲಿದೆ.

ಉ) ಕಾಮಗಾರಿ ಕೈಗೆತ್ತಿಕೊಂಡು 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

2287(3094) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):- ಮಾನ್ಯ ಪೌರಾಡಳಿ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಹಣ ಬಿಡುಗಡೆ ಮಾಡುವುದೇ;

ಇ) ಯಾವುದಾದರೂ ಯೋಜನೆಯಡಿ ಈ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು):-

ಅ) ಹೌದು

ಆ) IIನೇ ಹಣಕಾಸು ಯೋಜನೆಯಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿದೆ.

ಇ) ರಸ್ತೆ ದುರಸ್ತಿ ಮತ್ತು ಅವುಗಳ ನಿರ್ವಹಣೆ ನಗರ ಸಭೆಯ ಹೊಣೆ ಜವಾಬ್ದಾರಿಯಾಗಿರುತ್ತದೆ.

2288(3229) ಶ್ರೀ ಗಡ್ಡದೇವರಮಠ್ ಗಡ್ಡಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ ಜಿಲ್ಲೆಯಲ್ಲಿ ಗದಗನ್ನು ಬಿಟ್ಟರೆ ಎರಡನೇ ಹತ್ತಿ ಬೆಳೆಯುವ ಹಾಗೂ ಮಾರುವ ಹಾಗೂ ಸಂಗ್ರಹವಾಗುವ ದೊಡ್ಡ ಪೇಟೆ ಲಕ್ಷೇಶ್ವರ ಅನ್ನುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಲಕ್ಷೇಶ್ವರದಲ್ಲಿ 1 ಸ್ಪಿನಿಂಗ್ ಮಿಲ್, 2 ಹತ್ತಿ ಸ್ಪಿನ್ನಿಂಗ್ ಮಿಲ್, 28 ಹತ್ತಿ ರಾಟೆಗಳು ಇವು ಸುರಕ್ಷಿತ ದೃಷ್ಟಿಯಿಂದ ಅಗ್ನಿಶಾಮಕ ಠಾಣೆಯ ಅವಶ್ಯಕತೆ ಇದ್ದುದರ ಬಗ್ಗೆ 2002 ರ ಸರ್ಕಾರದ ಗಮನಕ್ಕೆ ತರಲಾಗಿದ್ದರೂ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸದಿರಲು ಕಾರಣವೇನು

ಇ) ಎ.ಪಿ.ಎಂ.ಸಿ. ಲಕ್ಷೇಶ್ವರದವರು ಇದಕ್ಕಾಗಿ 2 ಎಕರೆ ಜಮೀನನ್ನು ಅಗ್ನಿಶಾಮದಳದವರಿಗೆ ಹಸ್ತಾಂತರಿಸಲು ಒಪ್ಪಿದ್ದು ನಿಜವಲ್ಲವೆ;

ಈ) ಹಾಗಿದ್ದಲ್ಲಿ ಅಗ್ನಿಶಾಮಕ ಠಾಣೆಯನ್ನು ಯಾವಾಗ ಮಂಜೂರು ಮಾಡಲಾಗುವುದು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):-

ಅ) ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.